**CC 2159/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 2159/2025

**ಸಿ ಡಬ್ಲೂ -1**
**ಪಿ ಡಬ್ಲೂ -1**

**ಸಾಕ್ಷಿಯ ಹೆಸರು - ಮಂಜುಳಾ**
**ತಂದೆಯ ಹೆಸರು - ಸೀತಾರಾಮಪ್ಪ**
**ವಯಸ್ಸು -** 60 **ವರ್ಷಗಳು**
**ಉದ್ಯೋಗ - ಹೂವಿನ ವ್ಯಾಪಾರ**
**ವಾಸಸ್ಥಳ - ಈಶ್ವರ ನಗರ, ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 22-11-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ಮನೆ ಈಶ್ವರ ನಗರದ 4 ನೇ ಕ್ರಾಸ್ ನಲ್ಲಿ ಇರುತ್ತದೆ.

ಹೋದ ವರ್ಷ ಗೌರಿಹುಣ್ಣಿಮೆ ದಿನದಂದು ನಾನು ಹೂ ಕಟ್ಟಿ ಮಾರಾಟ ಮಾಡಲು ನಮ್ಮ ಮನೆಯಿಂದ ಬಜಾರಿಗೆ ಹೋಗುತ್ತಿದ್ದಾಗ ಸಣ್ಣ ಶಂಕ್ರಮ್ಮನ ಗುಡಿಯ ಒಣಿ ಸಂದಿಯಲ್ಲಿ ಒಬ್ಬ ವ್ಯಕ್ತಿ ಮುಂದೆಯಿಂದ ಬಂದು ನನ್ನ ಕೊರಳಿನಲ್ಲಿದ್ದ ಒಂದು ತೊಲೆಯ ಬಂಗಾರದ ಚೈನ್ ಅನ್ನು ಕಿತ್ತುಕೊಂಡ. ನಾನು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯಿತ್ನಿಸಿದರೂ ಸಿಗಲಿಲ್ಲ. ನಾನು ಚಿತ್ರಕೇರಿಯ ಗರಡಿ ಮನೆಯ ತನಕ ಆತನನ್ನು ಬೆನ್ನಟ್ಟಿ ಹೋದರೂ ಆತ ಸಿಗಲಿಲ್ಲ. ನಂತರ ಮನೆಗೆ ಹೋಗಿ ಹೂವನ್ನು ಇಟ್ಟು ಪಟ್ಟಣ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನನ್ನ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು ಗುರುತಿಸಲಾಯಿತು. ದೂರಿನಲ್ಲಿ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

ಪೋಲಿಸರು ಎರಡು ತಿಂಗಳುಗಳ ನಂತರ ನನ್ನ ಬಂಗಾರದ ಚೈನ್ ಸಿಕ್ಕಿರುತ್ತದೆ ಎಂದು ಹೇಳಿದರು. ಸದರಿ ಚೈನ್ ಅನ್ನು ಕಳ್ಳತನ ಮಾಡಿದ ವ್ಯಕ್ತಿ ಬಜಾರ್ ನಲ್ಲಿ ಮಾರಾಟ ಮಾಡಲು ಹೋದಾಗ ಪೋಲಿಸರು ಆತನನ್ನು ಹಿಡಿದಿರುವ ಬಗ್ಗೆ ತಿಳಿಸಿದರು. ನಾನು ಸದರಿ ವ್ಯಕ್ತಿಯ ಹೆಸರನ್ನು ಕೇಳಿಲ್ಲ, ಆದರೆ ಆತನನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಚೈನ್ ಕಿತ್ತುಕೊಂಡ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಬಣ್ಣದ ಅಂಗಿ ಹಾಕಿಕೊಂಡು ಕುಳಿತಿರುತ್ತಾನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 28-12-2024 ರಂದು ಮಧ್ಯಾಹ್ನ 3.50 ಗಂಟೆಗೆ ಪೋಲಿಸರಿಗೆ ನಾನು ಕಳ್ಳತನ ಆದ ಜಾಗವನ್ನು ತೋರಿಸಿದ್ದೆ ಅಂದರೆ ಸರಿ . ಪೋಲಿಸರು ಪಂಚರ ಸಮಕ್ಷಮ ಸದರಿ ಜಾಗದಲ್ಲಿ ಪಂಚನಾಮೆ ಮಾಡಿದ್ದರು ಅಂದರೆ ಸರಿ . ಈಗ ನಾನು ನೋಡುತ್ತಿರುವ ಪೋಟೋವನ್ನು ಪಂಚನಾಮೆ ಕಾಲಕ್ಕೆ ತೆಗೆಯಲಾಗಿತ್ತು ಅಂದರೆ ಸರಿ . ಸಾಕ್ಷಿ ಪೋಟೋ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2 ಎಂದು ಗುರುತಿಸಲಾಯಿತು.

ದಿಃ 22-01-2025 ರಂದು 1 ನೇ ಆರೋಪಿಯನ್ನು ಹೊಸಪೇಟೆ ಉಪಕಾರಾಗೃಹದಲ್ಲಿ ನೋಡಿ ಗುರುತಿಸಿದ್ದೆ ಅಂದರೆ ಸರಿ . ಆ ಬಗ್ಗೆ ಪೋಲಿಸರಿಗೆ ದಿಃ 23-01-2025 ರಂದು ಹೇಳಿಕೆ ನೀಡಿದ್ದೆ ಅಂದರೆ ಸರಿ . ದಿಃ 29-12-2024

ರಂದು ನನ್ನ ಬಂಗಾರದ ಸರವನ್ನು ಪೋಲಿಸ್ ಠಾಣೆಯಿಂದ ಬಿಡಿಸಿಕೊಂಡು ಬಂದಿದ್ದೆ ಅಂದರೆ ಸರಿ . ಆಗ ಭದ್ರತಾ ಪ್ರಮಾಣವನ್ನು ಬರೆದುಕೊಟ್ಟಿದ್ದೆ ಅಂದರೆ ಸರಿ . ಸಾಕ್ಷಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 3 ಎಂದು ಗುರುತಿಸಲಾಯಿತು. ಸಾಕ್ಷಿ 4 ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ.ಎಂ ವಕೀಲರಿಂದಃ**

ನಾನು ಅಕ್ಷರಸ್ಥಳಲ್ಲ. ದೂರನ್ನು ನನ್ನ ಅಳಿಯ ಬರೆಸಿರುತ್ತಾರೆ. ದೂರಿನಲ್ಲಿ ಎನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ . ಕಳ್ಳತನ ಆಗಿತ್ತು ಎನ್ನಲಾದ ಸ್ಥಳದ ಅಕ್ಕಪಕ್ಕದ ಮನೆಗಳ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ . ಪೋಲಿಸರು ಬಂಗಾರದ ಸರ ಸಿಕ್ಕಿದೆಯೆಂದು ಹೇಳಿದ ನಂತರವೇ ನನಗೆ ಕಳ್ಳತನದ ಬಗ್ಗೆ ಗೊತ್ತಾಯಿತು ಅಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಅಳಿಯನಿಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಬಂಗಾರದ ಸರ ನನ್ನದು ಎಂದು ತೋರಿಸಲು ಪೋಲಿಸರಿಗೆ ಬಿಲ್ ಕೊಟ್ಟಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲ.

1 ನೇ ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಅಂದರೆ ಸರಿ . ಪೋಲಿಸ್ ಠಾಣೆ ಎಲ್ಲಿದೆ ಮತ್ತು ಉಪಕಾರಾಗೃಹ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ . ನನಗೆ ಒದಲು ಬರೆಯಲು ಬಾರದ ಕಾರಣ ಪ್ರಕರಣದಲ್ಲಿನ ದಾಖಲೆಗಳಲ್ಲಿ ಎನು ಬರೆಯಲಾಗಿದೆ ಎಂದು ನನಗೆ ಮಾಹಿತಿಯಿಲ್ಲ ಅಂದರೆ ಸರಿ . ಪಂಚನಾಮೆಯನ್ನು ಎಲ್ಲಿ ಬರೆಯಿಲಾಯಿತು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಗೆ ನಾನು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ ಅಂದರೆ ಸರಿ . 1 ನೇ ಆರೋಪಿ ನನ್ನ ಬಂಗಾರದ ಸರವನ್ನು ಕಿತ್ತುಕೊಂಡು ಹೋಗಿಲ್ಲ ಮತ್ತು ಪೋಲಿಸರು ಬಂಗಾರ

ಕೊಟ್ಟಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಯಾವ ದಿನಾಂಕಗಳಂದು ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಅಳಿಯನಿಗೆ ಗೊತ್ತು ಎಂದು ನುಡಿಯುತ್ತಾರೆ. ಕಳ್ಳತನ ಆಗಿದೆ ಎನ್ನಲಾದ ಬಂಗಾರದ ಸರಕ್ಕೂ ಆರೋಪಿತರಿಗೂ ಸಂಬಂದವಿಲ್ಲದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.